ಘಂಟಾಕರ್ಣನ ಈ ಕೃತ್ಯದಿಂದ ವಿಷ್ಣುವು ಸುಪ್ರೀತನಾದನು. "ವಿಷ್ಣುವಾಗಿ ನಾನಿದ್ದೇನೆ ಎಂದು, ನನ್ನ ಇರುವಿಕೆಯನ್ನು ಈತನು ಇಷ್ಟೊಂದು ಪ್ರಬಲವಾಗಿ ನಂಬಿಕೊಂಡಿದ್ದಾನಲ್ಲ" ಎಂದು ವಿಷ್ಣುವು ಸಂತೋಷಪಟ್ಟನು. ಆ ಮುಹೂರ್ತದಲ್ಲಿಯೇ ಘಂಟಾಕರ್ಣನ ಪೂಜಾಗೃಹದಲ್ಲಿ ಪ್ರತ್ಯಕ್ಷನಾದನು. "ನಿನ್ನ ಶಿವನಿಷ್ಠೆಯನ್ನು ನಾನು ಮೆಚ್ಚಿದ್ದೇನೆ ಘಂಟಾಕರ್ಣ, ಆದರೆ ವಿಷ್ಣುವಾದ ನನ್ನನ್ನು ದ್ವೇಷಿಸುವುದನ್ನು ತೊರೆದುಬಿಡು. ಶಿವನು ನನ್ನ ಹೃದಯದಲ್ಲಿದ್ದಾನೆ, ನಾನು ಶಿವನ ಹೃದಯದಲ್ಲಿದ್ದೇನೆ. ನಾವಿಬ್ಬರೂ ಹರಿಹರರಾಗಿ ಏಕಮೂರ್ತಿಗಳಾಗಿದ್ದೇವೆ" ಎಂದು ಉಪದೇಶಿಸಿ, "ನಿನಗೆ ವಿವೇಕೋದಯವಾಗಲಿ, ನಿನಗೆ ಮಂಗಳ ವಾಗಲಿ" ಎಂದು ಆಶೀರ್ವದಿಸಿ ಅಂತರ್ಧಾನನಾದನು. ಆ ಬಳಿಕ ಘಂಟಾಕರ್ಣನಿಗೆ ವಿವೇಕವು ಜಾಗೃತವಾಯಿತೋ ಇಲ್ಲವೋ ತಿಳಿಯಲಿಲ್ಲ.

ಘಂಟಾಕರ್ಣನೆಂಬ ರಾಕ್ಷಸನೇ ಎಲ್ಲ ಮತಾಂಧತೆಗೂ ಮೂಲಪುರುಷನೆನ್ನಬಹುದು. ಬಂಗಾಳದೇಶದಲ್ಲಿ ಅವನಿಗೆ ವಿಚಿತ್ರವಾದ ಪರಿಯಲ್ಲಿ 'ಪೂಜೆ' ಯೂ ನೆರವೇರುತ್ತದೆ. ಘಂಟಾಕರ್ಣನದೆಂದು ಹೇಳುವ ಒಂದು ಮಣ್ಣಿನ ಮೂರ್ತಿ ಯನ್ನು ವಾರ್ಷಿಕವಾಗಿ ತಯಾರಿಸುತ್ತಾರೆ. ಅತ್ಯಂತ ದುರ್ಗಂಧ ಕುಸುಮಗಳನ್ನು ಹುಡುಕಿತಂದು, ಅವುಗಳಿಂದ ಆ ಮೂರ್ತಿಯನ್ನು ಪೂಜಿಸುತ್ತಾರೆ. "ವಿಷ್ಣುವು ದಿವ್ಯ ಪರಿಮಳವನ್ನು ಆಘ್ರಾಣಿಸದಂತೆ ತಡೆದೆಯಲ್ಲಾ, ಈಗ ಮೂಸು ಈ ದುರ್ಗಂಧವನ್ನು" ಎಂಬ ಪ್ರತೀಕಾರಭಾವನೆ ಅದರಲ್ಲಿರಬಹುದು. ಕೊನೆಯಲ್ಲಿ "ಸಾಯಿ ಘಂಟಾಕರ್ಣನೇ, ಸಾಯಿ" ಎಂದು ಶಪಿಸುತ್ತ ಅವನ ವಿಗ್ರಹವನ್ನು ಬಲವಾದ ಬಡಿಗೆಗಳಿಂದ ಬಡಿಬಡಿದು ಚೂರು ಮಾಡಿ, ಹರ್ಷೋದ್ಗಾರ ಗಳನ್ನು ಹೊಮ್ಮಿಸುತ್ತಾರೆ.

ನಾವು ಪ್ರತಿಯೊಬ್ಬರೂ ನಮನಮಗೆ ಇಷ್ಟವಾದ ಒಂದು ದೇವರನ್ನು ಸ್ವೀಕರಿಸಿ ಪೂಜಿಸಬೇಕು. ನಮ್ಮ ಸಾಧನೆ ಯಲ್ಲಿ ಪ್ರಾಮಾಣಿಕತೆಯಿರಬೇಕು: ನಮ್ಮ ಭಾವನೆಯಲ್ಲಿ ಸರ್ವಸಮರ್ಪಣವಿರಬೇಕು. ಒಂದು ಹಣ್ಣು ಕಳಿತು ಪಕ್ವವಾದ ಮೇಲೆ ತನ್ನ ಭಾರದಿಂದಲೇ ತೊಟ್ಟು ಕಳಚಿ ನೆಲಕ್ಕೆ ಬೀಳುತ್ತದೆ. ಆದರೆ ಕಾಯಾಗಿರುವಾಗಲೇ ಬಲವಂತವಾಗಿ ಕಿತ್ತರೆ ಅದು ಹುಳಿಯಾಗಿರುತ್ತದೆ. ಹಾಗೆ ಭಾವಗಳು ಪಕ್ವವಾಗುವವರೆಗೂ ನಮ್ಮ ನೆಚ್ಚಿನ ದೇವರನ್ನು ಪೂಜಿಸಿದರೆ, ಆ ನಮ್ಮ ಇಷ್ಟದೈವವೇ ವಿಶಾಲವಾಗಿ ಬೆಳೆದು ವಿಶ್ವವ್ಯಾಪಿಯಾಗಿಬಿಡುತ್ತದೆ. 'ನಮ್ಮ ದೇವರೇ ಎಲ್ಲೆಲ್ಲಿಯೂ ಇದ್ದಾನೆ, ಅವನೇ ಎಲ್ಲವೂ ಆಗಿದ್ದಾನೆ' ಎಂಬ ರಹಸ್ಯವು ಗೋಚರಿಸುತ್ತದೆ. ಹೀಗೆ ನಮ್ಮ ಅಂತರಂಗವು ಬಲಿಷ್ಠವಾದಮೇಲೆ, ನಮ್ಮ ಏಕನಿಷ್ಠೆಯ ಎಲ್ಲ ಬಂಧನಗಳೂ ಕಳಚಿಬಿಡುತ್ತವೆ. ಆಗ ನಮ್ಮ ಆದರ್ಶಗಳನ್ನು ಪ್ರೀತಿಸು ವುದೆಂದರೆ, ಎಲ್ಲರ ಆದರ್ಶಗಳನ್ನೂ ಪ್ರೀತಿಸುವುದು ಎಂದೇ ಆಗುತ್ತದೆ. ಆನೆಗೆ ಹೊರಕ್ಕೆ ಚಾಚಿಕೊಂಡ ಉದ್ದವಾದ ಎರಡು ದಂತಗಳಿರುತ್ತವೆ. ಅವು ಅಲಂಕಾರಕ್ಕೆ ಮಾತ್ರ, ಅವುಗಳಿಂದ ಏನನ್ನೂ ಅಗಿಯಲಾಗುವುದಿಲ್ಲ. ಆದರೆ ಬಾಯ ಒಳಗಿರುವ ಹಲ್ಲುಗಳಿಂದ ಅದು ತನ್ನ ಆಹಾರವನ್ನು ಅಗಿಯುತ್ತದೆ. **'ಹಾಥೀ ಕೇ ದಾಂತ್ ಖಾನೇ ಕೇ ಔರ್, ದಿಖಾನೇಕೆ ಔರ್'** – ಆನೆಯ ಹಲ್ಲುಗಳು ತಿನ್ನುವುದಕ್ಕೇ ಬೇರೆ, ತೋರಿಕೆಗೇ ಬೇರೆ ಎಂಬ ಗಾದೆಯೇ ಇದೆ. ಹಾಗೆಯೇ ಬಹಿರಂಗದಲ್ಲಿ ಮಾತ್ರ ನಮ್ಮ ಆದರ್ಶದಲ್ಲಿ ಪ್ರತಿಷ್ಠಿತರಾಗಿಬಿಡಬೇಕು. ನಿಜವಾದ ವೇದಾಂತವು ಎಲ್ಲರಿಗೂ ಸಹಾನುಭೂತಿಯನ್ನು ತೋರಬೇಕು. ಏಕಮೇವ ಅದ್ವಿತೀಯ ಅಥವಾ ಅದ್ವೈತವೇ ವೇದಾಂತ ಸಾರ.


ಘಂಟಾಕರ್ಣನ ಕಥೆ ಪೌರಾಣಿಕ ಜಗತ್ತಿನಲ್ಲಿ ಬಹಳ ಪ್ರಖ್ಯಾತವಾಗಿದೆ ಮತ್ತು ವೈವಿಧ್ಯಪೂರ್ಣವೂ ಆಗಿದೆ. ಕಿವಿಗೆ ಗಂಟೆ ಕಟ್ಟಿಕೊಂಡಿದ್ದ ಅವನು ಒಮ್ಮೆ ಪಾಕಶಾಲೆಯಲ್ಲಿದ್ದಾಗ, ಶಿವನು ವೇಷಮರೆಸಿಕೊಂಡು, ಅವನ ಬೆನ್ನಹಿಂದೆ ಬಂದು 'ಹರಿಯಿತು' ಎಂದು ಕೂಗಿದನಂತೆ. ಆ ಶಬ್ದದಲ್ಲಿ 'ಹರಿ' ಎಂಬ ವಿಷ್ಣುನಾಮವು ಬಂತಲ್ಲಾ ಎಂದು ಅದನ್ನು ಸಹಿಸಿಕೊಳ್ಳಲಾರದೆ, ಘಂಟಾಕರ್ಣನು ಅಲ್ಲಿಯೇ ಇದ್ದ ಒಂದು ಸಟ್ಟುಗವನ್ನು ಕೈಗೆತ್ತಿಕೊಂಡು ಆ ವೇಷಾಂತರಿಯನ್ನು ಬಡಿದೋಡಿಸಿದನು.


ಘಂಟಾಕರ್ಣನು ಮೊದಲಿಗೆ ವಿಷ್ಣುಭಕ್ತನೇ ಆಗಿದ್ದನು ಎಂಬ ಕಥೆಯೂ ಇದೆ. ವಿಷ್ಣುವಿನಿಂದಲೇ ಶಿವನು ಸರ್ವೋತ್ತಮನೆಂಬುದನ್ನು ಅರಿತುಕೊಂಡನಂತೆ. ಹಾಗೆ ಅರಿತಮೇಲೆ ಶಿವನನ್ನು ಕುರಿತು ಘೋರತಪಸ್ಸನ್ನು ಆಚರಿಸುತ್ತ, ತನ್ನ ಶರೀರವನ್ನೇ ಶಿವನಿಗಾಗಿ ಸಮರ್ಪಿಸಿದನು. ಆಗ ಘಂಟಾಕರ್ಣನ ದೇಹವೇ ಶಿವಾಲಯದ ಹೊಸ್ತಿಲಾಯಿತು. ಅವನ ಕೈಕಾಲುಗಳೇ ಅದಕ್ಕೆ ಬಾಗಿಲಾದವು. ಅವನ ತಲೆಯೇ ಘಂಟೆಯಾಯಿತು. ಶಿವಾಲಯವನ್ನು ಹೊಕ್ಕೊಡನೆ ಘಂಟೆ ಯನ್ನು ಬಾರಿಸಿ, ಆಮೇಲೆ ಶಿವನನ್ನು ಪೂಜಿಸಿದರೆ, ಶಿವನು ಮೆಚ್ಚಿಕೊಳ್ಳುತ್ತಾನೆ ಎಂಬ ಪ್ರತೀತಿಯೂ ಉಂಟಾಯಿತು. ಶಿವ ಬೇರೆ ವಿಷ್ಣು ಬೇರೆ ಎಂಬ ಭೇದಭಾವ ಸಲ್ಲದು – ಅಷ್ಟುಮಾತ್ರವಲ್ಲ ; ನಾನು ಬೇರೆ ದೇವರು ಬೇರೆ ಎಂಬ ಭಾವನೆಯೂ ಸಲ್ಲದು. ಆದ್ದರಿಂದಲೇ ವಿವೇಕಾನಂದರು "ಎಲ್ಲಿಯವರೆಗೆ ನಿನಗೆ ಮತ್ತು ಪರಮಾತ್ಮನಿಗೆ ಕೂದಲೆಳೆಯಷ್ಟು ವ್ಯತ್ಯಾಸವಾದರೂ ಇರುವುದೋ ಅಲ್ಲಿಯವರೆಗೆ ಅಂಜಿಕೆ ನಿಮ್ಮನ್ನು ಬಿಟ್ಟು ತೊಲಗುವುದಿಲ್ಲ" ಎಂದು ಎಚ್ಚರಿಸಿದ್ದಾರೆ.


ಕಥೆ : ರೇವತಿ

ಚಿತ್ರ : ಗೋವಿ

# ಜಗನ್ಮಾತೆಯಿಂದ ಅನುಗ್ರಹ ಪಡೆದ ಸರಳಾದಾಸ




4
ಚಿದುವೇನು? ನಿನ್ನನ್ನು ಇಂಥ ಕೆಲಸಕ್ಕೆ ಕಳಿಸುವುದಿಲ್ಲವಲ್ಲಾ!
ಉಳಿದವರೆಲ್ಲ ಮಾರುಕಟ್ಟೆಗೆ ಹೋಗಿದ್ದಾರೆ. ನಾನು ನೀರು ಹಾಯಿಸಲು ಬಂದಿದ್ದೇನೆ.
ಚಿದು, ನೀನು ಬಂದಿದ್ದು ನಮಗೆ ತುಂಬ ಸಂತೋಷವಾಗಿದೆ. ದಯವಿಟ್ಟು ಹಾಡುತ್ತೀಯೇನು? ನೀನು ಹಾಡುವ ಹಾಡುಗಳನ್ನು ಕೇಳುತ್ತ ಕೆಲಸ ಮಾಡಿದರೆ, ಆಯಾಸವಾಗುವುದೇ ಇಲ್ಲ.
5
ಚಿದು ಹಾಡುತ್ತ ಇದ್ದನು. ಅವನ ಹಾಡಿನ ಮಾಧುರ್ಯದಿಂದ ಇಡೀ ವಾತಾವರಣವು ಶಾಂತಿಯುತವಾಯಿತು. ಹಕ್ಕಿಗಳು ಹಾರುವುದನ್ನು ನಿಲ್ಲಿಸಿದವು. ಮರಗಳ ಕೊಂಬೆಗಳ ಮೇಲೆ ಕುಳಿತುಕೊಂಡು ಏಕಾಗ್ರತೆಯಿಂದ ಆಲಿಸಲಾರಂಭಿಸಿದವು.
6
ಸರಳಾದೇವಿಯು ಬಾವಿಯ ಕಟ್ಟೆಯ ಮೇಲೆ ಕುಳಿತು, ಚಿದುವಿನ ಹಾಡನ್ನು ಕೇಳುತ್ತ ತನ್ನನ್ನೇ ತಾನು ಮರೆತುಬಿಟ್ಟಳು.
7
ಕೇಳುತ್ತ, ಕೇಳುತ್ತ, ಸರಳಾದೇವಿಯು ಸಂತೋಷದಿಂದ ಕೈಯಲ್ಲಿ ತಾಳ ಹಾಕಲಾರಂಭಿಸಿದಳು. ಚಿದು ದಿಗ್ಭ್ರಾಂತನಾದನು. ಹಾಡು ಕೇಳುತ್ತಿರುವವಳು ಸರಳಾ ದೇವಿಯೇ ಎಂದು ಅವನಿಗೆ ಗೊತ್ತಾಗಲಿಲ್ಲ. ಉಳಿದವರು ಕೂಡ ಸಂಗೀತದಲ್ಲಿ ಮಗ್ನರಾಗಿಬಿಟ್ಟಿದ್ದರು. ಆದರೆ ಅವರಿಗೆ ದೇವಿಯ ದರ್ಶನ ಆಗಲಿಲ್ಲ.
8
ಚಿದು, ಯಾಕಪ್ಪಾ ಹಾಡುವುದನ್ನು ನಿಲ್ಲಿಸಿದೆ? ನೀನು ಅದೆಷ್ಟು ಚೆನ್ನಾಗಿ ಹಾಡುತ್ತೀಯಪ್ಪಾ! ಏನು ಬೇಕಾದರೂ ವರ ಕೇಳು, ಮಗು.
ನೀನು ನನಗೆ ವರಗಳನ್ನು ನೀಡುವೆಯಾ? ನೀನು ಜಗನ್ಮಾತೆಯಾದ ಸರಳಾದೇವಿಯೇನು?
ಚಿದು, ನಾನೇ ಸರಳಾ ದೇವಿ. ನಿನಗೆ ಏನು ಬೇಕೋ ಎಲ್ಲವನ್ನೂ ನಾನು ನಿನಗೆ ನೀಡುತ್ತೇನೆ.
9
ನೀನೇ ಸರಳಾದೇವಿ ಎನ್ನುವುದು ನಮಗೆ ಹೇಗೆ ತಾನೇ ಗೊತ್ತಾಗುತ್ತದೆ? ಹೀಗೆ ದಿಢೀರಾಗಿ ವರಗಳನ್ನು ಕೇಳು ಎಂದರೆ ಕೇಳುವುದಾದರೂ ಹೇಗೆ? ನಾನು ಯೋಚಿಸಿನೋಡಿ, ಆಮೇಲೆ ಕೇಳುತ್ತೇನೆ.
ಮುಗ್ಧ ಚಿದು! ಹಾಗೇ ಆಗಲಪ್ಪ. ನಿನಗೆ ವರ ಕೇಳಬೇಕು ಅನ್ನಿಸಿದರೆ ನನ್ನನ್ನು ಕರೆ.


10
ಚಿದು ಮೈ ಮರೆತು ಹಾಡುತ್ತಿದ್ದನು. ಆಗ ನೀರು ಹಾಯಿಸಲು ಉಪಯೋಗಿಸುತ್ತಿದ್ದ ದೊಣ್ಣೆ ಅವನ ಕೈಯಿಂದ ಜಾರಿ ಬಾವಿಯೊಳಗೆ ಬಿದ್ದುಹೋಯಿತು. ಅವನ ತಂದೆ ಮತ್ತು ಅಣ್ಣ ಇದರಿಂದ ಕೋಪಗೊಂಡು ಅವನಿಗೆ ಸಿಕ್ಕಾಪಟ್ಟೆ ಹೊಡೆದರು.
ನೀನೊಬ್ಬ ಕೆಲಸಕ್ಕೆ ಬಾರದವ. ನೀನು ದೊಣ್ಣೆಯನ್ನು ಕಳೆದುಕೊಂಡೆ.
11
ಅಯ್ಯೋ, ಈ ನೋವನ್ನು ತಡೆಯಲಾಗುತ್ತಿಲ್ಲವಲ್ಲ! ಆ ದೇವಿ ವರಗಳನ್ನು ಕೊಡುತ್ತೇನೆ ಎಂದು ಹೇಳಿದ್ದಳಲ್ಲವೇ? ನಾನು ಅವಳನ್ನು ಕರೆದರೆ ಅವಳೀಗ ಬಂದು ವರವನ್ನು ಕೊಡುತ್ತಾಳೇನು?
12
ಅವನು ದೇವಿಯನ್ನು ನೆನಪಿಸಿಕೊಂಡ ತಕ್ಷಣವೇ, ಸರಳಾದೇವಿಯು ಆತನ ಮುಂದೆ ಪ್ರತ್ಯಕ್ಷಳಾದಳು.
ನನ್ನ ಪ್ರೀತಿಯ ಚಿದು, ನಿನಗೇನು ವರ ಬೇಕು ಎಂದು ನಿಶ್ಚಯ ಮಾಡಿಕೊಂಡಿದ್ದೀಯೇನಪ್ಪಾ?!
ಜಗನ್ಮಾತೆಯೇ, ಮೊದಲು ನನ್ನ ಮೈನೋವನ್ನು ನಿವಾರಿಸು. ತುಂಬಾ ನೋಯುತ್ತಿದೆ.
13
ಮಗೂ, ನಿನಗೆ ಇನ್ನು ಮೇಲೆ ನೋವಾಗುವುದಿಲ್ಲ. ನಿನಗೆ ಏನು ವರ ಕೊಡಬೇಕೆಂದು ನಾನು ಈಗಾಗಲೇ ನಿರ್ಧರಿಸಿದ್ದೇನೆ. ಇಲ್ಲಿಗೆ ಬಾ. ನಿನ್ನ ನಾಲಗೆಯನ್ನು ಚಾಚು.
ದೇವಿಯು ಚಿದುವಿನ ನಾಲಗೆಯ ಮೇಲೆ ತನ್ನ ತ್ರಿಶೂಲದಿಂದ ಏನನ್ನೋ ಬರೆದಳು.